

## ಪ್ರಕೃತಿಯ ಕೌತುಕ

ಪ್ರಕೃತಿಯ ವೈಚಿತ್ರವೇ ಹಾಗೆ. ಗೊತ್ತಾಗದ ಗತ್ತಿನಲ್ಲಿ ಮಾನವನಿಗೇ ಸವಾಲಾಗಿ ನಿಲ್ಲುವ ಪರಿಯ ಹಾಗೆ. ಅದೆಷ್ಟೋ ವಿಸ್ಮಯಗಳನ್ನು ತನ್ನ ಒಡಲೊಳಗೆ ಪ್ರಕೃತಿ ಹುದುಗಿಸಿಕೊಂಡಿದ್ದು, ಶೋಧಿಸಿದಷ್ಟು, ಬೇಧಿಸಿದಷ್ಟು, ಅರ್ಥೈಸದಷ್ಟು, ಅರ್ಥ ನೀಡುವ ಪರಿ ಮತ್ತೆ ಮತ್ತೆ ಕುಡಿಯೊಡೆಯುವುದು ಕೌತುಕ.

ದಟ್ಟ ಅರಣ್ಯದೊಳಗೆ ಅನಾದಿಕಾಲದಿಂದಲೂ ಮೈತಳೆದು, ಅದೆಷ್ಟೋ, ಪ್ರಕೃತಿಯ ವೈಪರೀತ್ಯಗಳಿಗೆ ಮೈಯೊಡ್ಡಿದ್ದರೂ, ಒಂದಿನಿತೂ ಕೊಂಕದೆ ಅಚಲವಾಗಿ ನಿಂತ ಶಿಲೆ. ಕಾಡಿನ ಪರಿಸರದಲ್ಲಿ ಕಣ್ಣರಳಿಸಿ ನಡೆಯುವಾಗ ಗೋಚರಿಸಿದೆ. ಶಿಲೆ ಒಂದರ ಮೇಲೊಂದು ಲಗೋರಿ ಆಟದಲ್ಲಿ ಕಲ್ಲನ್ನು ಜತನವಾಗಿ ಪೋಣಿಸಿ ಇಟ್ಟ ಹಾಗೆ ಇದ್ದು, ನಮ್ಮ ಆತ್ಮವಿಶ್ವಾಸವನ್ನು ಇನ್ನಷ್ಟು ಹೆಚ್ಚಿಸುವಂತೆ ಕಂಡು ಬರುತ್ತದೆ. ಇದು ಯಲ್ಲಾಪುರ ತಾಲೂಕಿನ ಪ್ರಸಿದ್ದ ಸಾತೊಡ್ಡಿ ಜಲಪಾತದ ಸಮೀಪ ಕುಂಬ್ರಾಳ ಭಾಗದ ಕಾಡಿನಲ್ಲಿ ಕಂಡುಬಂದ ಕೇವಲ ಶಿಲೆ ಅಲ್ಲ, ಪ್ರಕೃತಿ ಕಡೆದು ನಿಲ್ಲಿಸಿದ ಕಲೆ. ಸೋಲರಿಯದ ಸೊಲ್ಲಿನಂತೆ ಒಂದರ ಮೇಲೊಂದು ಮೊನಚಿನಲ್ಲೂ ಸಮತೋಲನ ಕಾಯ್ದುಕೊಂಡು ಮಾನವನ ಶೌರ್ಯ, ಪರಾಕ್ರಮಕ್ಕೆ ಸೆಡ್ಡು ಹೊಡೆದಿದ್ದು ಹೀಗೆ!

—ಸುಬ್ರಾಯ ಬಿದ್ರೆಮನೆ, ಉತ್ತರಕನ್ನಡ

## ಮನೆಯೊಳಗೆ ಬಾವಿ...



ಭೂಮಿಯ ಮೇಲ್ಭಾಗದ ನೀರನ್ನು ಕುಡಿಯುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದು. ಹೀಗಾಗಿ ಕೊಳವೆ ಬಾವಿ, ಕೆರೆ ಹೀಗೆ ನೀರಿನ ನಾನಾ ಮೂಲಗಳಿದ್ದರೂ ಹಳ್ಳಿ ನಗರ ಸೇರಿದಂತೆ ಹೆಚ್ಚಿನ ಎಲ್ಲಾ ಮನೆಗಳ ಮುಂದೆ ಕುಡಿಯಲು ಯೋಗ್ಯವಾದ ನೀರಿಗಾಗಿ ಬಾವಿಯನ್ನು ತೋಡಲಾಗುತ್ತದೆ. ಪಶು ಪಕ್ಷಿಗಳ ಕಲ್ಮಶ ಬಾವಿಗೆ ಬಿದ್ದು ನೀರು ಕಲುಷಿತಗೊಳ್ಳದಿರಲಿ ಎನ್ನುವ ಮುಂಜಾಗ್ರತೆಯಿಂದ ನಮ್ಮ ಪೂರ್ವಿಕರು ಮನೆಯ ಒಳ ಭಾಗದಲ್ಲಿ ಬಾವಿಯನ್ನು ತೋಡಿಸುತ್ತಿದ್ದರಂತೆ. ಆದರೆ ಈಗ ದೇವಸ್ಥಾನಗಳನ್ನು ಬಿಟ್ಟರೆ ಮನೆಯ ಒಳಭಾಗದಲ್ಲಿ ಬಾವಿ ಕಾಣಸಿಗುವುದು ವಿರಳ. ಸ್ಥಳದ ಅಭಾವ ಅಥವಾ ಇನ್ನಾವುದೋ ಕಾರಣದಿಂದ ಅಂಗಳದಲ್ಲಿ ಬಾವಿಗೆ ಜಾಗ ನೀಡಲಾಗುತ್ತಿದೆ. ಇತ್ತೀಚೆಗೆ ಶ್ರೀ ಕ್ಷೇತ್ರ ಗೋಕರ್ಣಕ್ಕೆ ಪ್ರವಾಸ ಹೋಗಿದ್ದ ಸಂದರ್ಭದಲ್ಲಿ ಅಲ್ಲಿಯ ಮನೆಯೊಂದಕ್ಕೆ ಭೇಟಿ ನೀಡಿದಾಗ ಕಂಡು ಬಂದ ಮನೆಯೊಳಗಿನ ಅಪರೂಪದ ಬಾವಿ ಇದು.

—ವಂದನಾ ರವಿ ಕೆ.ವೈ.ವೇಣೂರು

---

**ನೀವೂ ಬರೆಯಿರಿ**

ನೀವು ಕಂಡ ಅಚ್ಚರಿಯ ಸಂಗತಿ, ವಿಷಯ, ವಸ್ತುವಿನ ಕುರಿತು 100 ಶಬ್ದಗಳಲ್ಲಿ ಪುಟ್ಟ ಬರಹವನ್ನು ಬರೆದು ಕಳುಹಿಸಿ, ಜೊತೆಗೆ ಆ ಬರಹಕ್ಕೆ ಸಂಬಂಧಿಸಿದ ಚಿತ್ರವೂ ಇರಲೇಬೇಕು.
ಎ–ಮೇಲ್ ವಿಳಾಸ: editorsu@sudha.co.in ಕಚೇರಿ ವಿಳಾಸ: ಸಂಪಾದಕರು, 'ಸುಧಾ' ವಾರಪತ್ರಿಕೆ, 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು– 560001